**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 31.05.2021**

# ಕೊಲೆ ಮಾಡಿದ ಆರೋಪಿತ ಬಂಧನ



## ಕೊಲೆ ಮಾಡಿದ ಆರೋಪಿತರ ಬಂಧನ

ದಿನಾಂಕ: 27.05.2021 ರಂದು 21:00 ಗಂಟೆಯ ಸುಮಾರಿಗೆ ಹೋನವಾಡ ಗ್ರಾಮದ ಕಸ್ತೂರಿಗಂಡ ಅಂಬಣ್ಣ ಮಾಲಗಾರ ಸಾ|| ಹೊನವಾಡ ಇವರು ತಿಕೋಟಾ ಪೊಲೀಸ ಠಾಣೆಯಲ್ಲಿ ದೂರುನೀಡಿದ್ದರಲ್ಲಿ, ತನ್ನ ಮಗ ದುಂಡಪ್ಪ ತಂದೆ ಅಂಬಣ್ಣ ಮಾಲಗಾರ ವಯಾ: 40 ವರ್ಷ ಇವನಿಗೆ ದಿನಾಂಕ: 26.05.2021 ರಂದು ರಾತ್ರಿ 12.00 ಗಂಟೆಯಿಂದ ದಿನಾಂಕ: 27.05.2021 ರ ಮುಂಜಾನೆ 06.00 ಗಂಟೆಯ ನಡುವಿನ ವೇಳೆಯಲ್ಲಿ ಯಾರೋ ಆರೋಪಿತರು ಯಾವುದೋ ಬಲವಾದ ಕಾರಣಕ್ಕಾಗಿ ನಮ್ಮೂರ ಬಸಪ್ಪ ತಂದೆ ರಾಮಣ್ಣ ದೇವನಾಯಕ ಇವರ ಜಮೀನದ ಬಾಂದಿನ ಬಾಜು ಕಲ್ಲಿನಿಂದ ಮತ್ತು ಚೂಪಾದ ಆಯುಧಗಳಿಂದ ಹೊಡೆದು ಕೊಲೆ ಮಾಡಿದ್ದು ಇರುತ್ತದೆ ಅಂತಾ ವಗ್ಯೆರೆ ಫಿರ್ಯಾಧಿಯನ್ನು ಕೊಟ್ಟ ಮೇರೆಗೆ ತಿಕೋಟಾ ಪೋಲೀಸ್ ಠಾಣೆಯಲ್ಲಿ ಗುನ್ನೆ ನಂ: 73/2021 ಕಲಂ: 302 ರೆ/ವು 34 ಐಪಿಸಿ ನೇದ್ದಕ್ಕೆ ಪ್ರಕರಣವನ್ನು ದಾಖಲು ಮಾಡಿಕೊಂಡು, ತನಿಖೆ ಕೈಕೊಳ್ಳಲಾಗಿತ್ತು.

ಇದರಲ್ಲಿ ಕೊಲೆ ಮಾಡಿದ ಆರೋಫಿತರು ಯಾರು ಎಂದೂ ತಿಳಿಯದೇ ಇದ್ದುದ್ದರಿಂದ ಈ ಪ್ರಕರಣದ ಆರೋಪಿತರನ್ನು ಪತ್ತೆ ಮಾಡುವ ಕುರಿತು ಮಾನ್ಯ ಎಸ್.ಪಿ ವಿಜಯಪುರ ರವರು ಶ್ರೀ ಆರ್.ಎಲ್.ಅರಸಿದ್ದಿ, ಹೆಚ್ಚುವರಿ ಪೋಲೀಸ ಅಧೀಕ್ಷಕರು ವಿಜಯಪುರ, ಶ್ರೀ. ಕೆ.ಸಿ.ಲಕ್ಷ್ಮೀನಾರಾಯಣ, ಡಿ.ಎಸ್.ಪಿ ವಿಜಯಪುರ ರವರ ಮಾರ್ಗದರ್ಶನದಲ್ಲಿ ಶ್ರೀ ಎಸ್.ಬಿ.ಪಾಲಭಾವಿ ಸಿಪಿಐ ವಿಜಯಪುರ ಗ್ರಾಮೀಣ ವೃತ್ತರವರ ನೇತೃತ್ವದಲ್ಲಿ ಎಸ್ ಕೆ ಲಂಗೂಟಿ, ಮಪಿಎಸ್ಐ ತಿಕೋಟಾ ಪಿಎಸ್, ಸಿಬ್ಬಂದಿಯವರಾದ ಆರ್ ಎಮ್ ಖಾನಾಪೂರ, ಎಮ್.ಎನ್.ಮುಜಾವರ, ಎಲ್.ಎಸ್.ಹಿರೇಗೌಡರ, ಎಸ್, ಎಮ್, ಹೋನಗೌಡ, ಎಸ್ ಎಸ್ ನಡುವಿನಮನಿ, ಎಮ್ ಬಿ ಜನಗೊಂಡ, ಎಮ್ ಎಚ್ ಇಚ್ಚೂರ, ಮಹೇಶ ಗಿರಡೆ, ಎಸ್ ಎನ್ ಹಿರೆಗೋಳ, ಸೋಮನಾಥ ಶಿವೂರ, ಬಿ ಎಲ್ ವಾಡೆದ, ಎಸ್ ಸಿ ನಾವಿ, ಶಿವಾನಂದ ಯಡಳ್ಳಿ, ಪರಸು ವಾಲಿಕಾರ ಇವರವನ್ನೊಳಗೊಂಡ ತಂಡವನ್ನು ರಚಿಸಿದ್ದು, ಸದರಿ ತನಿಖಾ ತಂಡವು ಈ ಪ್ರಕರಣದಲ್ಲಿ ಸೂಕ್ತ ಕಾರ್ಯಚರಣೆ ನಡೆಯಿಸಿ ಚಾಣಾಕ್ಷತನದಿಂದ ಪ್ರಕರಣ ಪತ್ತೆ ಹಚ್ಚಿದ್ದು, ಇದರಲ್ಲಿಯ ಆರೋಪಿತನಾದ ಮೃತನ ಖಾಸ ತಮ್ಮ ಸದಾಶಿವ ಮಾಲಗಾರ ಇತನು ಮೃತನ ಹೆಂಡತಿ ಜೋತೆಗೆ ಅನ್ಯೆತಿಕ ಸಂಬಂಧ ಹೊಂದಿದ್ದು, ಇದಕ್ಕೆ ಮೃತನು ಅಡ್ಡಿಯಾಗುತ್ತಿದ್ದರಿಂದ ಇದರಲ್ಲಿಯ ಮೂರು ಜನ ಆರೋಫಿತರು ಕೂಡಿ ಒಳಸಂಚು ಮಾಡಿ ಕೊಲೆ ಮಾಡಿದ್ದು, ತನಿಖೆಯಲ್ಲಿ ತಿಳಿದು ಬಂದಿದ್ದು, ಆರೋಪಿತರಾದ

1) ಸದಾಶಿವ ತಂದೆ ಅಂಬಣ್ಣ ಮಾಲಗಾರ

2) ಗೈಬುಸಾಬ ತಂದೆ ರಾಜೇಸಾಬ @ ಮೋದಿನಸಾಬ ತಿಗಣಿಬಿದರಿ

3) ಪಲ್ಲವಿ ಗಂಡ ದುಂಡಪ್ಪ ಮಾಲಗಾರ ಸಾ: ಎಲ್ಲರೂ ಹೋನವಾಡ ಇವರನ್ನು ಇಂದು ದಿನಾಂಕ: 31.05.2021 ರಂದು ದಸ್ತಗೀರ ಮಾಡಿದ್ದು, ದಸ್ತಗಿರಿಯಾದ ಆರೋಪಿತರಿಂದ ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ವಶಪಡಿಸಿಕೊಂಡಿದ್ದು ಇರುತ್ತದೆ.

ಈ ಪ್ರಕರಣ ಪತ್ತೆ ಮಾಡುವಲ್ಲಿ ಯಶಶ್ವಿಯಾದ ತಂಡದ ಕಾರ್ಯಾಚರಣೆಯನ್ನು ಮೆಚ್ಚಿ ಎಸ್.ಪಿ.ವಿಜಯಪುರ ರವರು ಶ್ಲಾಘಿಸಿದ್ದಾರೆ.

ಪೋಲೀಸ್ ಅಧೀಕ್ಷಕರು,
ವಿಜಯಪುರ ಜಿಲ್ಲೆ.

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.

ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು